ದಿನಾಂಕಃ 09-11-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದ</u>

ದಾವಾ ಸ್ವತ್ತುಗಳು ನಮ್ಮ ಅಜ್ಜನ ಹೆಸರಿನಿಂದ 1 ನೇ ಪ್ರತಿವಾದಿಯ ಹೆಸರಲ್ಲಿ ಮ್ಯೂಟೇಶನ ಮೂಲಕ 1999 ರಲ್ಲಿ ಆಗಿವೆ ಎಂದರೆ ಸರಿ ಅಲ್ಲ. ಆ ಮ್ಯೂಟೇಶನ ಪ್ರತಿಯನ್ನು ನಾವೇ ನ್ಯಾಯಾಲಯಕ್ಕೆ ಹಾಜರಪಡಿಸಿದ್ದೇನೆ ಎಂದರೆ ಸರಿ. ಆ ಮ್ಯೂಟೇಶನ್ ಆದ ನಂತರ ನಮ್ಮ ಅಜ್ಜ ಮತ್ತು ನಾವು 1 ನೇ ಪ್ರತಿವಾದಿಯನ್ನು ಕೇಳಿದ್ದೇವೆ. ನಾವು 1999 ರಲ್ಲಿ ಕೇಳಿದ್ದೇವೆ ಎಂದರೆ ಸರಿ. ಆಗ 1 ನೇ ಪ್ರತಿವಾದಿಯು ಏನೂ ಹೇಳಿರಲಿಲ್ಲ. (ಸಾಕ್ಷಿಗೆ ದಿಃ 25.04.1997 ರಂದು ಬರೆದುಕೊಟ್ಟಿದ್ದಾರೆ ಎಂದು ಹೇಳಲಾದ ನೋಂದಾಯಿತವಲ್ಲದ ರೂ.20/- ಛಾಪಾ ಕಾಗದದ ಮೇಲೆ ಬರೆದ ಕ್ರಯದ ಕರಾರುಪತ್ರವನ್ನು ಸಾಕ್ಷಿಗೆ ತೋರಿಸಿ ಕಂಕ್ರಂಟ್ ಮಾಡಿದ್ದರಿಂದ) ಅದರ ಮೇಲಿನ ಮುದ್ರಾಂಕ ಶುಲ್ಕ ಮತ್ತು ಕೊರತೆ ಮುದ್ರಾಂಕ ಶುಲ್ಕದ ಬಗ್ಗೆ ಸುಣಾವಣೆ ಮಾಡುವುದು ಇರುವುದರಿಂದ ಆ ದಾಖಲೆಯನ್ನು ಇಂಪೌಂಡ್ ಮಾಡಿಕೊಂಡು ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು